ಅಧ್ಯಕ್ಷರು : ನಿಮ್ಮದು ಬೆಂಗಳೂರು ಸಿಟಿ ಪಾರ್ಕಿಂಗ್ ವಿಷಯ ಬಂದಿದೆ. ಮಾನ್ಯ ಮುಖ್ಯಮಂತ್ರಿಗಳು ಈಗ ಸಭೆಯಲ್ಲಿ ಇಲ್ಲ. ಅವರು ಬಂದಾಗ ಅದನ್ನು ತೆಗೆದುಕೊಳ್ಳೋಣ. ಶೂನ್ಯ ವೇಳೆ ಬಗ್ಗೆ ಆಗಲಿ, ಗಮನ ಸೆಳೆಯುವ ಸೂಚನೆ ಬಗ್ಗೆ ಆಗಲಿ, ನಮ್ಮ ಕಛೇರಿಗೆ ತಾವು ಬಂದಾಗ ಮಾತನಾಡೋಣ ಸಮಯವನ್ನು ಇಲ್ಲಿ ವ್ಯಯ ಮಾಡುವುದು ಸರಿಯಲ್ಲ. ತಾವು ನನ್ನ ಕಛೇರಿಗೆ ಬನ್ನಿ. ನಿಮ್ಮ ಮುಂದೆಯೇ ಫೋನ್ ಮಾಡಿ ಉತ್ತರವನ್ನು ತರಿಸೋಣ.

ಮೈಸೂರು ಲ್ಯಾಂಪ್ಸ್ ಉದ್ದಿಮೆ ಕುರಿತು

+ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ಮೈಸೂರು ಲ್ಯಾಂಪ್ಸ್ ಉದ್ದಿಮೆ ಬಗ್ಗೆ ನಾನು ಇಲ್ಲಿ ಪ್ರಮುಖವಾಗಿ ಪ್ರಸ್ತಾಪ ಮಾಡಬೇಕಾಗಿದೆ. ಬಹುಶಃ ಸರ್ಕಾರದ ಉದ್ಯಮಗಳಲ್ಲಿ ಇದೊಂದು ದೊಡ್ಡದಾದ ಉದ್ಯಮ. ಈ ಮೈಸೂರು ಲ್ಯಾಂಪ್ಸ್ ಬಹಳಷ್ಟು ರೆಪ್ಯುಟೇಷನ್ ಹೊಂದಿರತಕ್ಕ ಉದ್ದಿಮೆ. ನಾವು ನೋಡಿದಹಾಗೆ ಮೈಸೂರು ಲ್ಯಾಂಪ್ಸ್ ತಯಾರು ಮಾಡಿದ ಅನೇಕ ವಸ್ತುಗಳಿಗೆ ರಾಷ್ಟ್ರದ ಬೇರೆ ಬೇರೆ ಭಾಗಗಳಲ್ಲಿ ಬಹಳಷ್ಟು ಬೇಡಿಕೆ ಇರುವುದನ್ನು ನೋಡಿದ್ದೇವೆ. ಕಳೆದ ಐದಾರು ವರ್ಷಗಳಿಂದ ಮಾತ್ರ ಇದು ನಷ್ಟವನ್ನು ಅನುಭವಿಸುತ್ತಿದೆ. ಅಲ್ಲಿ ಒಂದು ದುರಾಡಳಿತ ಇರಬಹುದು, ಅವ್ಯವಹಾರವಿರಬಹುದು, ಅಡ್ಮಿನಿಸ್ಟ್ರೇಷನ್ ಲ್ಯಾಪ್ಸಸ್ ಇರಬಹುದು, ಕಳೆದ ಆರು ವರ್ಷದಿಂದ ಇದು ನಷ್ಟವನ್ನು ಅನುಭವಿಸುತ್ತಿದೆ. ಅದಕ್ಕಿಂತ ಮುಂಚೆ ಲಾಭದಲ್ಲಿ ನಡೆದ ಸಂಸ್ಥೆ ಮತ್ತು ಅಲ್ಲಿರುವ ನೌಕರರು ಕೂಡ ಸರಿಯಾಗಿ ಕೆಲಸವನ್ನು ನಿರ್ವಹಣೆ ಮಾಡಿದ್ದನ್ನು ನಾವು ನೋಡಿದ್ದೇವೆ. ಆರು ವರ್ಷದಿಂದ ಇದು ನಷ್ಟವನ್ನು ಅನುಭವಿಸುತ್ತಿರುವುದರಿಂದ ಈಗ ಇದು ಬಿಐಎಫ್ಆರ್ ಮುಂದೆ ಈ ಪ್ರಕರಣವಿದೆ. ಬಿಐಎಫ್ಆರ್ ಮುಂದೆ ಸರ್ಕಾರ ತನ್ನ ವಾದವನ್ನು ಮಂಡಿಸುವುದು. ತನ್ನ ಕೆಲವು ಕ್ರಮಗಳೇನಿವೆ, ಅದರ ಬಗ್ಗೆ ಬಿಐಎಫ್ಆರ್ ಮುಂದೆ ಹೇಳಿದರೆ ಈ ಒಂದು ಸಂಸ್ಥೆ ಬಹುಶಃ ಪುನಶ್ಚೇತನ ತೆಗೆದುಕೊಂಡು ಮಾಡಬಹುದು. ಅದರ ಮೇಲೆ ಡಿಪೆಂಡ್ ಆಗಿರುವ ಸಾವಿರಾರು ನೌಕರದಾರರು, ಹತ್ತಾರು ಸಾವಿರ ಕುಟುಂಬಗಳು ಆ ಸಂಸ್ಥೆಯ ಮೇಲೆ ಡಿಪೆಂಡ್ ಆಗಿರುವಂಥವು ಇವೆ. ಇದು ಕೇವಲ ಮೈಸೂರು ಲ್ಯಾಂಪ್ಸ್ ಮತ್ತು ಆ ನೌಕರರಿಗೆ ಸಂಬಂಧಪಟ್ಟಿದ್ದಲ್ಲ ಮತ್ತು ಅದಕ್ಕೆ ಪೂರಕವಾಗಿ ಹಲವಾರು ಸಣ್ಣಪುಟ್ಟ ಇಂಡಸ್ಟ್ರಿಗಳು ಕೂಡ ನಡೆಯುತ್ತಿದ್ದವು. ಅವರುಗಳು ಮೈಸೂರು ಲ್ಯಾಂಪ್ಸ್‌ಗೆ ಬೇಕಾದ ವಸ್ತುಗಳನ್ನು ಸಪ್ಲೈ ಮಾಡುತ್ತಿದ್ದರು. ಸರ್ಕಾರದ ಉದ್ಯಮದಲ್ಲಿ ಈ ಬಲ್ಬ್ಸ್ ಉದ್ಯಮದ ಬಗ್ಗೆ ಯಾವುದಾದರೂ ಈ ರೀತಿ ನಡೆಸಿದ್ದರೆ ಇದು ಪ್ರಥಮವೆನ್ನಬಹುದು. ಕೇಂದ್ರದಲ್ಲಿರಬಹುದು, ರಾಜ್ಯದಲ್ಲಿರಬಹುದು, ಈ ರೀತಿ ನಡೆಸುತ್ತಿರುವುದು ಇದೊಂದು ಉದ್ದಿಮೆಯಲ್ಲಿ ಮಾತ್ರ ಹೀಗಾಗಿ ಇದನ್ನು ಉಳಿಸುವುದು ನಮ್ಮ ಸರ್ಕಾರದ ಜವಾಬ್ದಾರಿ ಅದಕ್ಕೆ ವರ್ಕಿಂಗ್ ಕ್ಯಾಪಿಟಲ್ ಕೊಟ್ಟಾದರೂ ಉಳಿಸಲಿ. ಈ ಉದ್ದಿಮೆಯನ್ನು ಪ್ರೈವೇಟೀಜ್ ಮಾಡುತ್ತೇವೆ ಎನ್ನುವ ಸುದ್ದಿ ಇದೆ. ಅದನ್ನು ಖಾಸಗೀಕರಣ ಮಾಡುವುದಾದರೂ ಮೊದಲು ಅದಕ್ಕೆ ವರ್ಕಿಂಗ್ ಕ್ಯಾಪಿಟಲ್ ಕೊಟ್ಟು ನಡೆಸುವಂತಾಗಲಿ. ಅದನ್ನು ಪೂರ್ತಿ ಮುಚ್ಚಿಹಾಕುವ ಕೆಲಸವಾಗಬಾರದು. ಆ ಉದ್ದಿಮೆ ಮುಂದುವರಿಯಬೇಕು. ಅವರು ತಯಾರಿಸಿದ ವಸ್ತುಗಳಿಗೆ ಬೇಕಾದಷ್ಟು ಡಿಮ್ಯಾಂಡ್ ಇದೆ. ಬೇಕಾದಷ್ಟು

ಮಾರ್ಕೆಟಿಂಗ್ ಇದೆ. ಇದರ ಬಗ್ಗೆ ನಮ್ಮ ಮಂತ್ರಿಗಳು ಸರ್ಕಾರ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಹೇಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ (ಭಾರೀ ಮತ್ತು ಮಧ್ಯಮ ಕೈಗಾರಿಕೆ ಸಚಿವರು) : ಮಾನ್ಯ ಅಧ್ಯಕ್ಷರೇ, ಮಾನ್ಯ ಗೌರವಾನ್ವಿತ ವಿರೋಧ ಪಕ್ಷದ ನಾಯಕರು, ಮೈಸೂರು ಲ್ಯಾಂಪ್ಸ್ ವಿಚಾರದಲ್ಲಿ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅವರು ಹೇಳಿದಹಾಗೆ ನಿಜವಾಗಿ ಇದೊಂದು ನಮ್ಮ ಹೆಮ್ಮೆಯ ಕೈಗಾರಿಕೆ ಮತ್ತು ಮೈಸೂರು ಲ್ಯಾಂಪ್ಸ್ ಬ್ರಾಂಡ್ ಬಗ್ಗೆ ಮಾರುಕಟ್ಟೆಯಲ್ಲಿ ಇನ್ನೂ ಬೆಲೆ ಇದೆ. ಗೌರವವೂ ಇದೆ. ಸಾಧಾರಣ 26.3.1936ನೇ ಇಸವಿಯಲ್ಲಿ ಪ್ರಾರಂಭವಾದ ಕೈಗಾರಿಕೆಯಿದು. ಆದರೆ ಈ ಕೈಗಾರಿಕೆ 1993-94 ರಿಂದ ಸತತವಾಗಿ ಹಾನಿಯನ್ನು ಅನುಭವಿಸುತ್ತಿದೆ. ಸಕ್ಷಸ್ಸೀವ್ ಗೌರ್ನಮೆಂಟ್ಸ್ ಕಳದ ಏಳೆಂಟು ವರ್ಷದಲ್ಲಿ ಈ ಕೈಗಾರಿಕೆಯನ್ನು ರೀಹಾಬಿಲಿಟೇಟ್ ಮಾಡಬೇಕು ಎಂದು ಪ್ರಾಮಾಣಿಕವಾಗಿ ಪ್ರಯತ್ನವನ್ನೂ ಮಾಡಿದ್ದಾರೆ. ಇವತ್ತು ಮುಖ್ಯವಾಗಿ ಕನ್‌ವರ್ಷನ್ ಆಫ್ ಲೋನ್ಸ್, ಈಕ್ವಿಟಿ ಒಂದು ಸಮಯದಲ್ಲಿ ಸುಪ್ರೀಂ ಕೋರ್ಟಿನಲ್ಲಿ ವ್ಯಾಜ್ಯ ಸೋತಾಗ ಸರ್ಕಾರದಿಂದ ಸುಮಾರು ಐದು ಕೋಟಿ ರೂಪಾಯಿಗಳು ಬಿಡುಗಡೆಯಾಯಿತು. ಮೂರು ಕೋಟಿ ರೂಪಾಯಿಗಳ ವರ್ಕಿಂಗ್ ಕ್ಯಾಪಿಟಲನ್ನು ಕೊಟ್ಟಿದ್ದೇವೆ. ಮತ್ತೊಂದು ಒಂದು ಕೋಟಿ 15 ಲಕ್ಷ ರೂಪಾಯಿಗಳನ್ನು ಏರ್ ಫೋರ್ಸ್ ಕ್ರಾಪ್ ಇನ್‌ಸೂರೆನ್ಸ್ ಪಾಲಿಸಿ ಇತ್ತು, ಅದಕ್ಕೂ ಹಣವನ್ನು ಕೊಟ್ಟಿದ್ದೇವೆ. ಹಾಗಾಗಿ ಸರ್ಕಾರ ಸಕ್ಷಸ್ಸೀವ್ ಗೌರ್ನಮೆಂಟ್ಸ್ ಪ್ರಯತ್ನವನ್ನು ಮಾಡುತ್ತಾ ಬಂದಿದ್ದಾರೆ. ಆದರೆ ದುರ್ದೈವದಿಂದ ಮಾರ್ಕೆಟ್ ಕಾಂಪಿಟಿಷನ್ಸ್ ಹೆಚ್ಚಿನ ಲೇಬರ್, ಇದರಿಂದಾಗಿ ಈ ಕೈಗಾರಿಕೆ ಹಾನಿಯನ್ನು ಅನುಭವಿಸುತ್ತಿದೆ. ಇದು ಬಿಐಎಫ್‌ಆರ್ ಮುಂದೆ ನೆಟ್ ವರ್ಕ್ ಲೂಸ್ ಆದಾಗ ಜನವರಿ 1997ನೇ ಇಸವಿಯಲ್ಲಿ ಇದು ಬಿಐಎಫ್‌ಆರ್ ಮುಂದೆ ಹೋಯಿತು. 18-7ರಲ್ಲಿ ಬಿಐಎಫ್‌ಆರ್ ನವರು ಈ ಕಂಪನಿಯನ್ನು ವೈಂಡ್ ಅಪ್ ಮಾಡಬೇಕೆಂದು ಆರ್ಡರ್ ಮಾಡಿತ್ತು. ಅದರ ಮೇಲೆ ಸರ್ಕಾರ ಇವತ್ತು ಎಎಫ್‌ಐಆರ್‌ಗೆ ಅಪೀಲ್ ಮಾಡಿದ್ದೇವೆ. ಎಐಎಫ್‌ಆರ್‌ಗೆ ಅಪೀಲ್ ಆಗಿ ಬಿಐಎಫ್‌ಆರ್ ಆರ್ಡರ್ ಮೇಲೆ ಸ್ಟೇ ಪಡೆದಿದ್ದೇವೆ. ಮುಂದಿನ 2ನೇ ಜನವರಿಯಲ್ಲಿ ಹಿಯರಿಂಗನ್ನು ಇಟ್ಟಿದ್ದಾರೆ. ಈ ಹಿಯರಿಂಗ್‌ಗೆ ಸರ್ಕಾರದ ಸ್ಟಾಂಡ್ ಕ್ಲಿಯರ್ ಇದೆ. ನಾವು ಪ್ರೈವೆಟೈಜ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಒಂದು ವೇಳೆ ಇದನ್ನು ಖಾಸಗೀಕರಣ ಮಾಡಲು ಆಗುವುದಿಲ್ಲವೆಂದರೆ ನಾವು ವಿ.ಆರ್.ಎಸ್.ನ್ನು ಇಂಟ್ರಡ್ಯೂಸ್ ಮಾಡುವವರಿದ್ದೇವೆ. ರಾಜ್ಯದಲ್ಲಿ ಹಲವಾರು ಕೈಗಾರಿಕೆಗಳು ಇದ್ದಾವೆ. ಎನ್‌ಜಿಇಎಫ್, ಮೈಸೂರು ಲ್ಯಾಂಪ್ಸ್, ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಹೀಗೆ ಹಲವಾರು ಕೈಗಾರಿಕೆಗಳು ಅನಾರೋಗ್ಯದಿಂದ ಕೂಡಿವೆ. ಕೆಲವು ಕಡೆ ಕಾರ್ಮಿಕರ ಸಂಖ್ಯೆ ಹೆಚ್ಚಾಗಿದೆ. ನಾವು ವಿಶ್ವ ಬ್ಯಾಂಕನ್ನು ಅಪ್ರೋಚ್ ಮಾಡಿದ್ದೇವೆ. ಅವರನ್ನು ಅಪ್ರೋಚ್ ಮಾಡಿ ವಿಆರ್‌ಎಸ್‌ಗೆ ನಾವು ಹಣವನ್ನು ಕೇಳಿದ್ದೇವೆ. ಅವರು ಹೇಳಿದ್ದಾರೆ ಪ್ರೈವಟೈಸ್ ಮಾಡಬೇಕಾದರೆ ಅಥವಾ ಕ್ಲೋಸ್ ಮಾಡಬೇಕಾದರೆ one of the two ತಾವು ಚೂಸ್ ಮಾಡಿದರೆ, `we will give VRS' ಎಂದು ಹೇಳಿದ್ದಾರೆ. ಹಾಗಾಗಿ ನಾವು ಅದರ ಬಗ್ಗೆ ಅಧ್ಯಯನ ಮಾಡುತ್ತಿದ್ದೇವೆ. ಮೊದಲ ಪ್ರಿಯಾರಿಟಿ ನಾವು ನೋಡುವುದು ಕಾರ್ಮಿಕರ ಹಿತ. ಅದರ ಜೊತೆಗೆ ಕೈಗಾರಿಕೆ ಹಿತ ನೋಡುತ್ತೇವೆ. ರಾಜ್ಯ ಸರ್ಕಾರದ ಹಣ ಸಾಕಷ್ಟು ಅಲ್ಲಿ ಇದೆ.

ಆ ಹಿತ ನೋಡಿ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ. ಎಲ್ಲೆಲ್ಲಿ ಪ್ರೈವಟೈಸ್ ಮಾಡಲಿಕ್ಕೆ ಸಾಧ್ಯ ಇದೆ, ಖಂಡಿತವಾಗಿ ಪ್ರೈವಟೈಸ್ ಮಾಡುತ್ತೇವೆ. ಎಲ್ಲೆಲ್ಲಿ ಸರ್ಕಾರದಿಂದ ನಡೆಸಲಿಕ್ಕೆ ಸಾಧ್ಯ, ಅಲ್ಲಿ ಖಂಡಿತವಾಗಿ ಸರ್ಕಾರದಿಂದ ನಡೆಸುತ್ತೇವೆ. ಎಲ್ಲಿ ಏನೂ ಮಾಡಲಿಕ್ಕೆ ಆಗುವುದಿಲ್ಲ, ಅಲ್ಲಿ ಕಾರ್ಮಿಕರಿಗೆ ಅನ್ಯಾಯ ಮಾಡುವುದಿಲ್ಲ. ವಿಆರ್ಎಸ್ ಕೊಡುತ್ತೇವೆ. ವಿಆರ್ಎಸ್ ಕೊಟ್ಟು ನಾವು ಕಾರ್ಖಾನೆಗಳನ್ನು ಕ್ಲೋಸ್ ಮಾಡಬೇಕಾಗುತ್ತದೆ. ನಾವು ಅಸೆಟ್ಗಳನ್ನು ಮಾರಾಟ ಮಾಡಬೇಕಾಗುತ್ತದೆ. ಬೇರೆ ಮಾರ್ಗವಿಲ್ಲ. ಮೈಸೂರು ಲ್ಯಾಂಪ್ಸ್ ಬಗ್ಗೆ ನಾವು ಈಗಾಗಲೇ ಸ್ಟೇ ಪಡೆದುಕೊಂಡಿದ್ದೇವೆ. ಪ್ರೈವಟೈಸ್ ಮಾಡಿಲಿಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಪ್ರೈವಟೈಸ್ ಒಂದು ವೇಳೆ ಆಗಲಿಲ್ಲ ಎಂದರೆ ನಾವು ವಿಆರ್ಎಸ್ ಅನ್ನು ಇಂಟ್ರಡ್ಯೂಸ್ ಮಾಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್ : ಇಲ್ಲಿಯವರೆಗೆ ಏನಾಗಿದೆ? ಮೊನ್ನೆ 10ನೇ ತಾರೀಖಿನ ದಿವಸ ಬಿಐಎಫ್ಆರ್ ಮುಂದೆ ಕೇಸ್ ಇತ್ತು. ಅಲ್ಲಿಯವರೆಗೆ ಸರ್ಕಾರದವರು ಅಪಿಯರ್ ಆಗಿದ್ದಿಲ್ಲ ನಿಜವಾಗಿ ಹೇಳಬೇಕು ಎಂದರೆ. ಯಾವುದೇ ಒಂದು ಸಬ್ಮಿಷನ್ ಅಲ್ಲಿ ಮಾಡಿರಲಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ನಾವು ಅಪೀಲ್ ಫೈಲ್ ಮಾಡಿದ್ದೆವು. ಹಿಯರಿಂಗ್ ಡೇಟ್ ಹತ್ತನೇ ತಾರೀಖು ಇತ್ತು. ಅಪೀಲ್ ಮುಂಚೆಯೇ ನಾವು ಫೈಲ್ ಮಾಡಿದ್ದೇವೆ. For admission it was kept on 10th. ಅಷ್ಟರೊಳಗೆ ಕ್ಯಾಬಿನೆಟ್ ಡಿಸಿಷನ್ ಮಾಡಿದೆವು. ಕ್ಯಾಬಿನೆಟ್ ಡಿಸಿಷನ್ ಆಷ್ಟೇ ಅಲ್ಲ ಮಾನ್ಯ ಮುಖ್ಯ ಮಂತ್ರಿಗಳು ಈ ಕೈಗಾರಿಕೆ ದೃಷ್ಟಿಯಿಂದ in anticipation of Cabinet approval, approval ಕೊಟ್ಟಿದ್ದಾರೆ. ನಾವು ಎಐಎಫ್ಆರ್ ಮುಂದೆ ವಾದ ಮಾಡಬೇಕಾದರೆ ಕ್ಯಾಬಿನೆಟ್ ತೀರ್ಮಾನ ಆಗ ಬೇಕಾಗಿತ್ತು. ಕ್ಯಾಬಿನೆಟ್ ಇವತ್ತು ಸೇರಿತ್ತು. ಇದಕ್ಕಿಂತ ಮುಂಚೆ ನಾಲ್ಕೈದು ದಿವಸಗಳ ಹಿಂದೆ ಸ್ವತಃ ಮಾನ್ಯ ಮುಖ್ಯಮಂತ್ರಿಗಳು in anticipation of cabinet approval, approval ಕೊಟ್ಟು, we have pleaded and yesterday we have got a stay also.

ಶ್ರೀ ಜಗದೀಶ್ ಶೆಟ್ಟರ್ : ಈ ಕಾರ್ಖಾನೆಯನ್ನು ಉಳಿಸುವುದಕ್ಕೆ ಬಿಐಎಫ್ಆರ್ ಮುಂದೆ ಏನು ಪ್ರಯತ್ನ ಮಾಡುವುದಕ್ಕೆ ಹೊರಟಿದ್ದೀರಲ್ಲ, ಆ ಪ್ರಯತ್ನವನ್ನು ದಯವಿಟ್ಟು ಮುಂದುವರಿಸಿ. ಮತ್ತೊಂದು ವಿಚಾರ ಅಂದರೆ ಶ್ರೀಮತಿ ರೇಣುಕಾ ವಿಶ್ವನಾಥ್ ಅವರು ಅದಕ್ಕೆ ಸಿಎಂಡಿ ಇದ್ದರು. ಕಳೆದ 5-6 ತಿಂಗಳ ಹಿಂದೆ ಅದನ್ನು ಯಾವ ರೀತಿ ಪುನರುಜ್ಜೀವನ ಮಾಡಬೇಕು ಎಂಬ ಚಿಂತನೆ ನಡೆಯುತ್ತಿತ್ತು. ಅದೇ ಸಂದರ್ಭದಲ್ಲಿ ಸಡನ್ ಆಗಿ ಅವರನ್ನು ಬದಲಾವಣೆ ಮಾಡಿಬಿಟ್ಟರು. ಹೀಗಾಗಿ ಯಾರು ಅದರ ಬಗ್ಗೆ ಆನೆಸ್ಟ್ ಆಗಿ ಅದರ ಬಗ್ಗೆ ಚಿಂತನೆ ಇಟ್ಟುಕೊಂಡು, ಕಳಕಳಿ ಇಟ್ಟುಕೊಂಡು ಕೆಲಸ ಮಾಡುತ್ತಿದ್ದರು, ಈ ರೀತಿ ಅಧಿಕಾರಿಗಳನ್ನು ಬದಲಾವಣೆ ಮಾಡುವುದರಿಂದ ನಾಳೆ ಆ ಕಾರ್ಖಾನೆಯ ಉಳಿವಿನ ಒಂದು ಪ್ರಶ್ನೆಯೂ ಬರುತ್ತದೆ. ಅದಕ್ಕೆ ಇದರ ಬಗ್ಗೆಯೂ ಒಂದು ರೀಥಿಂಕಿಂಗ್ ಆಗಲಿ. ಮತ್ತು ಇದನ್ನೇ ಪುನರುಜ್ಜೀವನ ಮಾಡಿ. ಈಗೇನು ಪ್ರೈವಟೈಸೇಷನ್ ವಿಚಾರ ಹೇಳಿದಿರಲ್ಲ, ಪ್ರೈವಟೈಸೇಷನ್ ಅಥವಾ ಸರ್ಕಾರವೇ ವರ್ಕಿಂಗ್ ಕ್ಯಾಪಿಟಲ್ ಕೊಟ್ಟು ಮುಂದೆ ನಡೆಸಿಕೊಂಡು ಹೋಗಲಿಕ್ಕೆ ಏನು ಪ್ರಯತ್ನ ಮಾಡಬೇಕು, ದಯವಿಟ್ಟು ಆ ಕೆಲಸವನ್ನು ಮಾಡಿ. ಆ ಕಾರ್ಖಾನೆ ಉಳಿಯಬೇಕು. ಏಕೆಂದರೆ ಅದು

ಒಂದು ವೆಲ್ ರೆಪ್ಯುಟೆಡ್ ಕಾರ್ಖಾನೆ ಈಗ ತಾವೇ ಹೇಳಿದ್ದೀರಿ 1936ನೇ ಇಸವಿಯಿಂದ ನಡೆಯುತ್ತಿರುವಂತಹ ಕಾರ್ಖಾನೆ. ಒಳ್ಳೆಯ ಹೆಸರುವಾಸಿಯಾದಂತಹ ಕಾರ್ಖಾನೆ, ಇದಕ್ಕೆ ಸಾಕಷ್ಟು ಮಾರ್ಕೆಟಿಂಗ್ ಇದೆ. ಅದರಿಂದ ಈ ಕಾರ್ಖಾನೆಯನ್ನು ಸರ್ಕಾರವೇ ನಡೆಸಿಕೊಂಡು ಹೋಗುವಂತಹದು ಮಾಡಬೇಕು. ಅದು ಆಗುವುದಿಲ್ಲ ಎಂದರೆ ಲಾಸ್ಟ್ ರೆಸಾರ್ಟ್ ಎಂದರೆ ಪ್ರೈವಟೈಸೇಷನ್ ಮಾಡುವುದು. ಅದಕ್ಕಾಗಿ ಆದರೂ ತಾವು ಪ್ರಾಮಾಣಿಕ ಪ್ರಯತ್ನ ಮಾಡಿ ಸರ್ಕಾರ ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು ಎಂದು ನನ್ನ ವಿನಂತಿ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ಶ್ರೀಮತಿ ರೇಣುಕಾ ವಿಶ್ವನಾಥ್ ಅವರು ಸಿಎಂಡಿ ಆಗಿ ಎರಡು ಮೂರು ತಿಂಗಳಿಂದ ಕೆಲಸ ಮಾಡುತ್ತಿದ್ದರು. ಅವರ ವರ್ಗಾವಣೆ ಆಗಿದ್ದು ನಿಜ. ಅಧಿಕಾರಿಗಳನ್ನು ವರ್ಗಾವಣೆ ಮಾಡುವುದು ಸರ್ಕಾರದ ಅಧಿಕಾರ ಇದೆ. ಆ ಪ್ರಕಾರ ವರ್ಗಾವಣೆ ಮಾಡಿದ್ದಾರೆ. ಅಲ್ಲಿ ಶ್ರೀ ಗುರು ಚರಣ್ ಎಂಬ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಕಾರ್ಯದರ್ಶಿ ಅವರು ಇದ್ದಾರೆ, ಅವರೂ ಸಹ ಕೇಪಬಲ್ ಆಫೀಸರ್ ಇದ್ದಾರೆ. ಅವರಿಗೆ ನಾವು ಈಗಾಗಲೇ ಅರೇಂಜ್ ಮೆಂಟ್ ಮಾಡಿದ್ದೇವೆ. ಅಧಿಕಾರಿಗಳಿಂದ ಏನೂ ತೊಂದರೆ ಆಗುವುದಿಲ್ಲ, ಅದರ ಬಗ್ಗೆ ತಾವು ಕಾಳಜಿ ಮಾಡಬೇಡಿ. ಕೇಂದ್ರ ಸರ್ಕಾರ ಸಹ ಇವತ್ತು ಏರ್ ಇಂಡಿಯಾ, ಇಂಡಿಯನ್ ಏರ್‌ಲೈನ್ಸ್, ಎಂಟಿಎನ್ಎಲ್, ವಿಎಸ್ಎನ್ಎಲ್ ಇವುಗಳನ್ನು ಪ್ರೈವಟೈಸೇಷನ್ ಮಾಡಬೇಕು ಎಂದು ವಿಚಾರ ಮಾಡುತ್ತಿರುವ ವಿಷಯ ದಿನ ಬರುತ್ತಿದೆ. ನಿನ್ನೆ ಹಣಕಾಸಿನ ಸಚಿವರು ಬಹಳ ಚೆನ್ನಾಗಿ ಹೇಳಿದ್ದಾರೆ. ಇಂಡಸ್ಟ್ರಿ ಬಗ್ಗೆ ಹೇಳಿದ್ದಾರೆ. ನನ್ನ ಕಡೆಗೆ ಕನ್ಸೀಷನ್ ಸಲುವಾಗಿ ಭರಬೇಡಿ. ನನ್ನ ಕಡೆಗೆ ರಿಲೀಫ್ ಸಲುವಾಗಿ ಬರಬೇಡಿ. ಉತ್ಪಾದನೆ ಜಾಸ್ತಿ ಮಾಡಿ ಎಂದು ಹೇಳಿದ್ದಾರೆ ಕ್ವಾಲಿಟಿ ಹೆಚ್ಚು ಮಾಡಿ ಎಂದು ಹೇಳಿದ್ದಾರೆ. ಹಾಗಾಗಿ ಇವತ್ತು ಕೈಗಾರಿಕೆ ಉಳಿಯಬೇಕಾದರೆ ಈ ಯುಗದಲ್ಲಿ productivity ಹೆಚ್ಚಾಗಬೇಕಾಗುತ್ತದೆ. ಕ್ವಾಲಿಟಿ ಬೆಳೆಯಬೇಕಾಗುತ್ತದೆ. ಕಾಸ್ಟ್ ಎಫೆಕ್ಟ್ ಇರಬೇಕಾಗುತ್ತದೆ. ಹಾಗಾಗಿ ಸರ್ಕಾರ ಇವತ್ತು ಪ್ರಾಮಾಣಿಕವಾಗಿ ಒಂದು ಕಮೀಷನ್ ಅಪಾಯಿಂಟ್ ಮಾಡಿದೆ. ಶ್ರೀ ಪದ್ಮನಾಭನ್ ಅವರ ಅಧ್ಯಕ್ಷತೆಯಲ್ಲಿ ಆಯೋಗ ಆಗಿದೆ. ಅವರು ಒಂದೊಂದು ಕೇಸ್ ತೆಗೆದುಕೊಳ್ಳುತ್ತಿದ್ದಾರೆ. ಎಲ್ಲಿ ಸ್ವತಃ ಸರ್ಕಾರದಿಂದ ರೀಹ್ಯಾಬಿಲಿಟೇಟ್ ಮಾಡುವುದಕ್ಕೆ ಸಾಧ್ಯ ಇದೆ ಖಂಡಿತವಾಗಿ ಸರ್ಕಾರದಿಂದ ಹಣ ಕೊಟ್ಟು ಮಾಡಿಸುತ್ತೇವೆ. ಎಲ್ಲಿ ಪ್ರೈವಟೈಸೇಷನ್ ಮಾಡಬೇಕು ಅಲ್ಲಿ ಪ್ರೈವಟೈಸ್ ಮಾಡುತ್ತೇವೆ. ಎಲ್ಲಿ ಏನೂ ಮಾಡಲಿಕ್ಕೆ ಸಾಧ್ಯ ಇಲ್ಲ ಅದರ ಬಗ್ಗೆ ತಮ್ಮೆಲ್ಲರ ವಿಶ್ವಾಸವನ್ನು ತೆಗೆದುಕೊಂಡು ಏನು ಅಂತಿಮ ನಿರ್ಣಯ ಮಾಡಬೇಕೋ ಅದನ್ನು ಮಾಡಬೇಕಾಗುತ್ತದೆ.

ಶ್ರೀ ಎಸ್. ಸುರೇಶ್ ಕುಮಾರ್ : ತಮ್ಮ ಗೃಹ ಕಛೇರಿಗೆ ನಾನು ಮೈಸೂರ್ ಲ್ಯಾಂಪ್ಸ್ ನಿಯೋಗವನ್ನು ಮೂರ್ನಾಲ್ಕು ಸಲ ಕರೆದುಕೊಂಡು ಬಂದಿದ್ದೇನೆ. ನಾವು ಖಾಸಗೀಕರಣಕ್ಕೆ ವಿರೋಧ ಅಲ್ಲ. ಪ್ರಶ್ನೆ ಇರುವುದು ನೀವು ಅವತ್ತು .....

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಇದು ಶೂನ್ಯ ವೇಳೆ, ಬೇರೆಯವರೂ ಅವಕಾಶ ಕೇಳಲು ಮನವಿ ಕಳಿಸಿದ್ದಾರೆ. ನಾವು ಇದನ್ನು ಡಿಬೇಟ್ ಆಗಿ ಕನ್‌ವರ್ಟ್ ಮಾಡಲು ಸಾಧ್ಯ ಇಲ್ಲ.

ಶ್ರೀ ಎಸ್. ಸುರೇಶ್ ಕುಮಾರ್ : ನಾನು ಕ್ಲಾರಿಫಿಕೇಶನ್ ಕೇಳುತ್ತಿದ್ದೇನೆ. ಖಾಸಗೀಕರಣಕ್ಕೆ ಒಪ್ಪಿ ಒಬ್ಬರು ಸಿಂಗಪೂರಿನ ಪಾರ್ಟಿ ಬಂದಿದ್ದಾರೆ. ಒಂದು ಕೋಟಿ ರೂಪಾಯಿ ಡಿಪಾಸಿಟ್ ಇಡಬೇಕು ಎಂದು ಹೇಳಿದರು. ಸರ್ಕಾರ ಖಾಸಗೀಕರಣದ ಆ ಪಾರ್ಟಿಯ ಜೊತೆಗೆ ಏನಾದರೂ ಮಾತುಕತೆ ಮುಂದುವರೆಸಿದ್ದಾರಾ? ಅದೊಂದು ಪ್ರಶ್ನೆಗೆ ಉತ್ತರ ಬಯಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಟೆಮ್ಮಾಕ್ ಎಂಬ ಒಂದು ಸಂಸ್ಥೆ, ಅವರು ಖರೀದಿ ಮಾಡಲಿಕ್ಕೆ ಬಂದಿಲ್ಲ. ಅವರು ಕನ್ಸಲ್‌ಟೆಂಟ್ಸ್ ಇದ್ದ ಹಾಗೆ. ಅವರು ಒಂದು ಕೋಟಿ ರೂಪಾಯಿ ಜಮಾ ಮಾಡಿಲ್ಲ, ಅಥವಾ ಒಂದು ರೂಪಾಯಿ ಇನ್‌ವೆಸ್ಟ್ ಮಾಡಿಲ್ಲ. ಆದರೆ ಪುನಃ ಅವರು ವೈಂಡಿಂಗ್ ಅಪ್ ಆದ ನಂತರ ದಿನಾಂಕ 24ಕ್ಕೆ ಬಂದು ಒಂದು ಪ್ರಪೋಸಲ್ ಕೊಟ್ಟಿದ್ದಾರೆ. ನಾವು ಅವರ ಜೊತೆ ಮಾತುಕತೆ ಮಾಡುತ್ತಿದ್ದೇವೆ.

ದಿನಾಂಕ 11.11.2000ರಂದು ಸಂಜೆ ರಾಣೆಬೆನ್ನೂರಿನಲ್ಲಿ ನಡೆದ ಕೋಮು ಗಲಭೆ ಕುರಿತು

ಶ್ರೀ ಕೆ.ಬಿ. ಕೋಳಿವಾಡ್ (ರಾಣೆಬೆನ್ನೂರು) : ಮಾನ್ಯ ಅಧ್ಯಕ್ಷರೆ, ದಿನಾಂಕ 11.11.2000ದಂದು ಸಂಜೆ ರಾಣೆಬೆನ್ನೂರಿನಲ್ಲಿ ಒಂದು ಘಟನೆ ನಡೆದಿದೆ. ಇದು ಬಹಳ ವಿಷಾದನೀಯವಾದಂತಹ ವಿಷಯ. ರಾಣೆಬೆನ್ನೂರು ನಗರ ನನ್ನ ರಾಜಕೀಯ ಅನುಭವದ ಪ್ರಕಾರ ಸುಮಾರು 30 ವರ್ಷಗಳಿಂದ ಅತ್ಯಂತ ಶಾಂತಿಪ್ರಿಯವಾದುದು. ಆ ಶಾಂತಿ ಪ್ರಿಯವಾದಂತಹ ಆ ಜಾಗದಲ್ಲಿ ಒಮ್ಮಿಂದ ಒಮ್ಮೆಗೆ ಸ್ವಲ್ಪ ಕೋಮು ಪ್ರಚೋದಿತವಾದಂತಹ ಗಲಭೆ ನಡೆದಿದ್ದು ಬಹಳ ವಿಷಾದನೀಯ ಎನ್ನತಕ್ಕ ಮಾತನ್ನು ಹೇಳುತ್ತೇನೆ. ದಿನಾಂಕ 11.11.2000ದಂದು ಸಂಜೆ 7.30ಕ್ಕೆ ಒಮ್ಮಿಂದ ಒಮ್ಮೆಗೇ ವಿವಾದಾಸ್ಪದ ಸ್ಥಳಕ್ಕೆ ಸಂಬಂಧಿಸಿದಂತೆ ಎರಡು ಕೋಮುಗಳ ನಡುವೆ ಗದ್ದಲ ಉಂಟಾಯಿತು. ಅದು ವಿಕೋಪಕ್ಕೆ ಹೋಗಿ ಪರಿಸ್ಥಿತಿ ಉದ್ರಿಕ್ತವಾಯಿತು. ಪೋಲೀಸರು ಸಹಿತ ಸರಿಯಾದ ವೇಳೆಗೆ ಬೆಳಿಗ್ಗೆ ಸ್ಥಳಕ್ಕೆ ಆಗಮಿಸಿ ಪರಿಸ್ಥಿತಿಯನ್ನು ಹತೋಟಿಗೆ ತರಲು ಪ್ರಯತ್ನ ಮಾಡಿದ್ದಾರೆ. ಹತೋಟಿಗೆ ತರುವ ಪ್ರಯತ್ನದಲ್ಲಿ ಅನಿವಾರ್ಯವಾಗಿ ಲಾಠಿ ಛಾರ್ಜ್ ಮಾಡತಕ್ಕ ಪರಿಸ್ಥಿತಿ ಬಂದಿದೆ. ಅಶ್ರುವಾಯುಗಳನ್ನು ಸಿಡಿಸತಕ್ಕ ಪರಿಸ್ಥಿತಿ ಬಂದಿದೆ. ಎರಡು ಸುತ್ತು ಗಾಳಿಯಲ್ಲಿ ಗುಂಡು ಹಾರಿಸತಕ್ಕ ಪರಿಸ್ಥಿತಿಯೂ ಬಂದಿದೆ. ಮತ್ತು ಈ ಸುದ್ದಿ ತಿಳಿದ ಕೂಡಲೇ ಜಿಲ್ಲಾಧಿಕಾರಿಗಳು, ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳು ತಕ್ಷಣ ಸ್ಥಳಕ್ಕೆ ಧಾವಿಸಿ ಅಲ್ಲೇ ವಾಸ್ತವ್ಯವನ್ನು ಹೂಡಿದ್ದಾರೆ. ಮತ್ತು ಬೆಳಗಾವಿಯಿಂದ ಐಜಿ ಅವರು ಸಹ ಸ್ಥಳಕ್ಕೆ ಭೇಟಿ ಕೊಟ್ಟಿದ್ದಾರೆ. ಈ ಗಲಭೆಯಲ್ಲಿ ಯಾವುದೇ ಪ್ರಾಣ ಹಾನಿ ಆಗಿಲ್ಲ ಎನ್ನತಕ್ಕದ್ದು ನನ್ನ ಗಮನಕ್ಕೆ ಬಂದಿದೆ. ಒಂದು ಮೋಟಾರ್ ಸೈಕಲ್ ಮತ್ತು ಒಂದೆರಡು ಶೆಡ್ಡುಗಳಿಗೆ ದುಷ್ಕರ್ಮಿಗಳು ಬೆಂಕಿ ಹಚ್ಚಿದ್ದಾರೆ ಎನ್ನತಕ್ಕ ವಿಷಯ ನನ್ನ ಗಮನಕ್ಕೆ ಬಂದಿದೆ. ಪುನಃ ದಿನಾಂಕ 12ರಂದು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಶಾಂತಿ ಸಮಿತಿಯನ್ನು ಕರೆದು ಸಾರ್ವಜನಿಕರಿಗೆ ಇದರ ಬಗ್ಗೆ ಸರಿಯಾದ ತಿಳುವಳಿಕೆಯನ್ನು ಕೊಟ್ಟಿದ್ದಾರೆ. ಕೊಟ್ಟು ಸುಮಾರು 3 ತಿಂಗಳವರೆಗೆ ಶಾಂತಿಯನ್ನು ಕಾಪಾಡಿಕೊಳ್ಳಬೇಕು. ವಿವಾದಾಸ್ಪದವಾದಂತಹ ಸ್ಥಳದ ಬಗ್ಗೆ ಒಂದು ನಿರ್ಣಯವನ್ನು ತೆಗೆದುಕೊಳ್ಳೋಣ ಎನ್ನತಕ್ಕ ಒಂದು ನಿರ್ಣಯವನ್ನು ಜಿಲ್ಲಾಧಿಕಾರಿಗಳು